ಒ ಎಸ್ ನಂಃ **11/2015**

ಡಿಡಬ್ಲ್ಯೂಃ 2

ಪ್ರಮಾಣ ವಚನ ಭೋದಿಸಿದ ದಿನಾಂಕ :**17.03.2025**

ಪಾಟೀ ಸವಾಲುಃ ಮೃತ **1** ನೇ ಪ್ರತಿವಾದಿ ವಾರಸುದಾರರ ಪರಃ ಶ್ರೀ ಕೆ ಎನ್ ಎಸ್ ವಕೀಲರಿಂದಃ

ಬೊಳಿಯ ಪೂಜಾರಿ ದಾವಾ ಜಾಗಗಳನ್ನು ಮೂಲ ಗೇಣಿಗೆ ತೆಗೆದುಕೊಂಡಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರ ಸಲ್ಲಿಸಲು ವಕೀಲರು ಮಾಹಿತಿ ನೀಡಿದ್ದಾರೆ. ನಮ್ಮ ವಕೀಲರಿಗೆ ಪ್ರತಿವಾದ ಪತ್ರ ಸಲ್ಲಿಸಲು ಯಾರು ಮಾಹಿತಿ ಕೊಟ್ಟರು ಎಂದು ಗೊತ್ತಿಲ್ಲ. ಬೊಳಿಯ ಪೂಜಾರಿಯವರು ಎಷ್ಟು ಸ್ವತ್ತುಗಳನ್ನು ಮೂಲಗೇಣಿಗೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಬೊಳಿಯ ಪೂಜಾರಿಯವರು ಮೂಲಗೇಣಿಗೆ ಪಡೆದಿದ್ದ ಸ್ವತ್ತುಗಳ ಸರ್ವೆ ನಂ. ನನಗೆ ಗೊತ್ತಿಲ್ಲ.

2. ಬೊಳಿಯ ಪೂಜಾರಿಯವರಿಗೆ 5 ಜನ ಮಕ್ಕಳು ಇದ್ದರು. ಅವರೆಂದರೆ ನಾರಾಯಣ ಪೂಜಾರಿ, ಶೀನಪ್ಪ ಪೂಜಾರಿ, ಶೇಷಮ್ಮ, ಸುಂದರಿ ಮತ್ತು ಕೃಷ್ಣಪ್ಪ. ಬೊಳಿಯ ಪೂಜಾರಿಯವರ ಮಕ್ಕಳ ನಡುವೆ ಪಾಲಾದ ವಿಚಾರ ಗೊತ್ತಿಲ್ಲ.

3. ನಮ್ಮ ಸ್ವಾಧೀನದಲ್ಲಿರುವ ಸ್ವತ್ತು ನನ್ನ ತಂದೆಗೆ ಡಿಕ್ಲರೇಷನ್ ನಲ್ಲಿ ಬಂದಿರುತ್ತದೆ. ಅವರು ಆ ಸ್ವತ್ತುಗಳನ್ನು 1954 ನೇ ಇಸವಿಯಲ್ಲಿ ರವಿರಾಜ್ ಎನ್ನುವವರಿಂದ ಗೇಣಿಗೆ ಪಡೆದಿದ್ದರು. ಅ ಬಗ್ಗೆ ಗೇಣಿಚೀಟಿಯನ್ನು ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ವಕೀಲರಿಗೆ ನೀಡಿರಬಹುದು.

4. ಡಿಕ್ಲರೇಷನ್ ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಆ ಗೇಣೀಚೀಟಿಯನ್ನು ಟ್ರಿಬ್ಯುನಲ್ ಗೆ ಸಲ್ಲಿಸಿರುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸ್ವಾಧೀನದಲ್ಲಿರುವ ಜಾಗದ ಸರ್ವೆ ನಂ. 55/ಸಿ1, ವಿಸ್ತೀರ್ಣ 1 ಎಕರೆ 37 ಸೆಂಟ್ಸ್‌ಗಳು, 54 /2 ವಿಸ್ತೀರ್ಣ 15 ಸೆಂಟ್, 55/2 ವಿಸ್ತೀರ್ಣ 3 ಸೆಂಟ್, 55/5-1 ವಿಸ್ತೀರ್ಣ 2 ಸೆಂಟ್, 54/1 ವಿಸ್ತೀರ್ಣ 5 ಎಕರೆ 73 ಸೆಂಟ್ಸ್‌ಗಳು. ಮೇಲೆ ತಿಳಿಸಿದ ಎಲ್ಲಾ ಸರ್ವೆ ನಂ. ಗಳ ವಿಸ್ತೀರ್ಣದ ಜಾಗ ಒಂದೇ ಬೌಂಡರಿಯಲ್ಲಿ ಬರುತ್ತದೆ. ನನ್ನ ತಂದೆ ರವಿರಾಜ್ ರವರಿಂದ ಗೇಣಿಗೆ ಪಡೆದ ಸ್ವತ್ತುಗಳ ಸರ್ವೆ ನಂ.55/ಸಿ1 , 54 /2 (15ಸೆಂಟ್) , 55/2 ವಿಸ್ತೀರ್ಣ 3 ಸೆಂಟ್, 55/5-1 ವಿಸ್ತೀರ್ಣ 2 ಸೆಂಟ್.

ನನ್ನ ತಂದೆ ಮೇಲೆ ತಿಳಿಸಿದ ಸ್ವತ್ತುಗಳನ್ನು ಗೇಣಿಗೆ ಪಡೆಯುವ ಮುನ್ನ ಅವು ಯಾರ .5 ಸ್ವಾಧೀನದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಗೇಣಿಗೆ ಪಡೆದ ಸ್ವತ್ತುಗಳಿಗೆ ಲಗತ್ತಾಗಿ ಒಂದು ಸರ್ಕಾರಿ ಜಾಗ ಇತ್ತು. ಅದು ಎಷ್ಟು ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ಗೇಣಿಗೆ ಪಡೆಯುವ ಕಾಲಕ್ಕೆ ಸದರಿ ಸ್ವತ್ತುಗಳಿಗೆ ಬೌಂಡರಿಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಗೇಣಿಗೆ ಪಡೆಯುವ ಕಾಲಕ್ಕೆ ಸದರಿ ವರ್ಗ ಮತ್ತು ಕುಮ್ಕಿ ಜಾಗ ನನ್ನ ಪ್ರಕಾರ ಸ್ವಾಧೀನಕ್ಕೆ .ಬಂದಿರುತ್ತದೆ

ಈ ಹಂತದಲ್ಲಿ ಮಾನ್ಯ ಮೃತ 1 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು

**ಪಾರ್ಟಿ ಸವಾಲುಗಃ- ಕಾಲಾವಕಾಶ ಕೋರಿದ್ದು, ನೀಡಲಾಯಿತು.**